ವಸತಿ ಯೋಜನೆಗಳು

1414(1682); ಶ್ರೀ ಜೆಲುವರಾಯಸ್ವಾಮಿ. ಎನ್ (ನಾಗಮಂಗಲ)

ಅ) ಮಂಡ್ಯ ತಾಲ್ಲೂಕು, ತೂಬಿನಕೆರೆ ಬಳಿ 800 ಎಕರೆ ಪ್ರದೇಶದಲ್ಲಿ ಉಪನಗರ (ಸ್ಯಾಟಲೈಟ್ ಟೌನ್) ನಿರ್ಮಾಣ ಯೋಜನೆ ರೂಪಿಸಲಾಗಿದೆಯೇ; ಈ ಯೋಜನೆಯ ರೂಪುರೇಷೆಗಳೇನು; ಈ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು; ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದೆಯೇ; ಇದ್ದಲ್ಲಿ, ವಿವರಗಳನ್ನು ಒದಗಿಸುವುದು;

ಆ) ಮಂಡ್ಯ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ವಸತಿ ಯೋಜನೆಗಳನ್ನು (ಮನೆ ಮತ್ತು ನಿವೇಶನ) ರೂಪಿಸಿ ಸಾರ್ವಜನಿಕರಿಗೆ ವಿತರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ; ಈ ಯೋಜನೆಗಳು ಪ್ರಸ್ತುತ ಯಾವ ಹಂತದಲ್ಲಿವೆ (ಸಂಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಮಂಡ್ಯ ನಗರವು ಮೈಸೂರು ಹಾಗೂ ಬೆಂಗಳೂರು ನಗರಗಳ ಮಧ್ಯೆ ಹೆದ್ದಾರಿಗೆ ಹೊಂದಿಕೊಂಡಿದ್ದು ಮನೆ/ನಿವೇಶನಗಳಿಗೆ ಸಾಕಷ್ಟು ಬೇಡಿಕೆ ಇರುವುದರಿಂದ ಮಂಡ್ಯ ನಗರಕ್ಕೆ ಸುಸಜ್ಜಿತ ಉಪನಗರವನ್ನು ನಿರ್ಮಾಣ ಮಾಡುವ, ಅವಶ್ಯಕತೆ ಇರುವುದರ ಹಿನ್ನೆಲೆಯಲ್ಲಿ ಸೂಕ್ತ ಜಮೀನುಗಳನ್ನು ಗುರುತಿಸಲಾಗಿದೆ. ಸದರಿ ಜಮೀನುಗಳು ಉಪನಗರ ನಿರ್ಮಾಣಕ್ಕೆ ಸೂಕ್ತವಾಗಿರುವ ಕಾರಣ ಭೂಸ್ವಾಧೀನಪಡಿಸಿಕೊಳ್ಳಲು ನಿರ್ಣಯಿಸಲಾಗಿದೆ. ಕರ್ನಾಟಕ

ಗೃಹ ಮಂಡಳಿ ವಸತಿ ಯೋಜನೆಗೆ ಪೂರ್ತಿ ಜಮೀನು ಭೂಸ್ವಾಧೀನವಾದ ನಂತರ ಮಂಡಳಿ ನಿರ್ಣಯದಂತೆ ಯೋಜನೆಯ ರೂಪರೇಷಗಳನ್ನು ತಯಾರಿಸಬೇಕಾಗುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಕ ಹಂತದಲ್ಲಿದ್ದು, ದಿನಾಂಕ:16-01-2014ರಂದು ಭೂಸ್ವಾಧೀನ ಕಾಯ್ದೆ ಕಲಂ 4(1)ರನ್ವಯ ಹೊರಡಿಸಿರುವ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಆ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೈಗೆತ್ತಿಕೊಂಡಿರುವ ವಸತಿ ಯೋಜನೆಗಳ ವಿವರ ಈ ಕೆಳಕಂಡಂತಿದೆ:

ಜಿಲ್ಲೆ	ತಾಲ್ಲೂಕು	ಗ್ರಾಮ	ವಿಸ್ತೀರ್ಣ ಎ. ಗು.	ಷರಾ
ಮಂಡ್ಯ	ನಾಗಮಂಗಲ	ಆಲಾಳು, ಇರಬನಹಳ್ಳಿ	95-03	ಪ್ರಾರಂಭಿಕ ಹಂತದಲ್ಲಿದ್ದು ಭೂ-ಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯು ದಿನಾಂಕ: 12/12/2013ರಲ್ಲಿ ಅನುಮೋದನೆಯಾಗಿದ್ದು, ದಿನಾಂಕ:16.01.2014 ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.
ಮಂಡ್ಯ	ಮಂಡ್ಯ	ಎಲಚಾಕನಹಳ್ಳಿ ನೂದಕೂಪ್ಪಲು, ರಾಗಿಮುದ್ದನಹಳ್ಳಿ ಊರಮಾರಕಸಲಗೆರೆ (ತೂಬಿನಕೆರೆ)	268-13 1/2 21-12 21-19 489-01 1/2	
ಮಂಡ್ಯ	ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ	19-06	ಪ್ರಾರಂಭಿಕ ಹಂತದಲ್ಲಿದ್ದು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯು ದಿನಾಂಕ: 10/12/2013 ರಲ್ಲಿ ಅನುಮೋದನೆಯಾಗಿದ್ದು, ದಿನಾಂಕ: 16.01.2014ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.
ಮಂಡ್ಯ	ಪಾಂಡವಪುರ	ಕನ್ನಾಳು	34-09	ಪ್ರಾರಂಭಿಕ ಹಂತದಲ್ಲಿದೆ. 60:40ರ ಅನುಪಾತದಲ್ಲಿ ಭೂಮಾಲೀಕರಿಗೆ ಅಭಿವೃದ್ಧಿಪಡಿಸಿದ ನಿವೇಶನ ನೀಡುವ ಕುರಿತು ವಸತಿ ಯೋಜನೆ ಕೈಗೊಳ್ಳುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ವಇ 310 ಕಗೃಮಂ 2013, ದಿನಾಂಕ: 30.10.2013 ರಲ್ಲಿ ಅನುಮೋದನೆಯಾಗಿರುತ್ತದೆ.

ಮಂಡ್ಯ	ಕೆ.ಆರ್.ಪೇಟೆ	ಚಿಕ್ಕೋನಹಳ್ಳಿ	1-34	ಸಂಪರ್ಕ ರಸ್ತೆಗಾಗಿ ಭೂಸ್ವಾಧೀನಪಡಿಸಲು ಕಲಂ 6(1)ರ ಅಧಿಸೂಚನೆಯು, ದಿನಾಂಕ:05.12.2013 ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿದ್ದು, ಭೂಸ್ವಾಧೀನ ಕಾಯ್ದೆ ಕಲಂ (9) ಮತ್ತು (10) ವಿಚಾರಣೆ ಹಂತವಲ್ಲಿದೆ.
ಮಂಡ್ಯ	ಶ್ರೀರಂಗಪಟ್ಟಣ	ಬೆಳವಾಡಿ ಮತ್ತು ಹಲ್ಕಾಡಿ	100-00	ಸಹಭಾಗಿತ್ವ ಯೋಜನೆ ಅಡಿಯಲ್ಲಿ ವಸತಿ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ದಿನಾಂಕ: 23.11.2013 ರಂದು ನಡೆದ 451ನೇ ಮಂಡಳಿ ಸಭೆಯಲ್ಲಿ ವಿಷಯ ಸಂಖ್ಯೆ 36ರ ಅಡಿಯಲ್ಲಿ ಸರ್ಕಾರದ ಮಾರ್ಗಸೂಚಿ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯವಾಗಿರುತ್ತದೆ.